ಮುಂಚಿತವಾಗಿ ನಮ್ಮ ಕನ್ನಡ ಜನಗಳನ್ನು, ನಾವು ಗುರುತಿಸಬೇಕಾಗಿದೆ. ಅವರ ಆಡುಭಾಷೆ ಒಂದೊಂದೂ ಒಂದು ತೆರನಾಗಿದೆ. ಪ್ರಪಂಚದ ಎಲ್ಲ ದೊಡ್ಡ ಭಾಷೆಗಳ ಗತಿಯೂ ಹೀಗೇನೆ. ಆದರೆ, ನಾವು ಬರೆಯುವುದು ಜನಕ್ಕೆ ತಿಳಿಯಬೇಕಾದಲ್ಲಿ ನಾವು ಭಾಷೆಯ ಏಕರೂಪತೆಗೆ ಗಮನ ಕೊಡಬೇಕಾಗುತ್ತದೆ. ಇಂದು ಮೈಸೂರು ಕನ್ನಡ, ಮಂಗಳೂರು ಕನ್ನಡ, ಧಾರವಾಡ ಕನ್ನಡ ಎಂದು ಹೇಳುವ ಸಂಪ್ರದಾಯ ನಮ್ಮ ಬರವಣಿಗೆಯಿಂದಾಗಿ ಬಂದುಬಿಟ್ಟಿದೆ. ನಮ್ಮದು ಅಷ್ಟೊಂದು ದೊಡ್ಡ ದೇಶವಲ್ಲ; ಆದರೂ ಒಂದು ಕಡೆಯ ಜನ, ಇನ್ನೊಂದು ಕಡೆಯವರು ಬರೆದ ಪುಸ್ತಕಗಳನ್ನು, ಪತ್ರಿಕೆಗಳನ್ನು ಓದಿ ತಿಳಿಯುವುದಕ್ಕೆ ಕಷ್ಟವಾಗಿ ಬಂದಲ್ಲಿ, ಆಗ ಬರಹಗಾರರಾದ ನಾವೇ ನಮ್ಮ ಮಾತಿನ ವಿಸ್ತಾರಕ್ಕೆ ಅಡಚಣೆ ತಂದುಕೊಳ್ಳುತ್ತೇವೆ. ಅಲ್ಲಲ್ಲಿನ ಸ್ಥಳೀಕ ಗ್ರಾಮ್ಯ ಪದಗಳನ್ನು ಹಟದಿಂದ, ಪುಸ್ತಕಗಳಲ್ಲಿ ತುಂಬಿಸುವ ಪ್ರಯತ್ನದಿಂದ, ಯಾವ ದೇವರಿಗೆ ಪ್ರೀತಿಯೋ ನಾನು ಕಾಣೆ. ಬ್ರಿಟಿಷರಿಂದ ಬಂದ ಪ್ರಾಂತದ ಅಡ್ಡಗೋಡೆಗಳನ್ನು ಮುರಿಯಬೇಕೆನ್ನುತ್ತಿರುವ ನಾವು, ಇನ್ನೊಂದು ದಾರಿಯಿಂದ ಅದನ್ನು ಏರಿಸುತ್ತ ಹೋದರೆ ಹೇಗೆ? ಯಾವೊಂದು ವಿಷಯದಲ್ಲೂ ನಮ್ಮಲ್ಲಿ ಗ್ರಂಥ, ಪುಸ್ತಕ, ಲೇಖನ, ಪತ್ರಿಕೆಗಳ ಬಾಹುಳ್ಯವಿಲ್ಲ. ಇರುವುದನ್ನು ಎಲ್ಲ ಭಾಗದ ಕನ್ನಡಿಗರಿಗೂ ಅರ್ಥವಾಗುವ ರೀತಿಯಲ್ಲಿ ಸಾಮಾನ್ಯವಾದ ಒಂದು ಭಾಷೆಯ ರೂಪ ಬೆಳೆಯುವಂತೆ ನಾವು ಮಾಡಬೇಡವೆ? ಪರಿಷತ್ತಿನಂತಹ ಒಂದು ಸಂಸ್ಥೆ ಇಂಥ ವಿಷಯದಲ್ಲಿ ಹೊಣೆಯನ್ನು ಹೊತ್ತು, ಮುಂದೆ ಬರಬೇಕಾಗಿದೆ.

ಇವೊತ್ತಿನ ದಿನ, ಜನಗಳಲ್ಲಿ ವಾಚನಾಭಿರುಚಿ ಹೆಚ್ಚಾಗಿ ಬೆಳೆದಿಲ್ಲ, ಅಥವಾ ಸಾಕಷ್ಟು ಬೆಳೆದಿಲ್ಲ ಎಂಬುದು ನಾವೆಲ್ಲರೂ ಒಪ್ಪುವ ಮಾತು. ನಮ್ಮಲ್ಲಿ ಓದು ಬರಹ ಕಲಿತವರ ಸಂಖ್ಯೆ ಕಡಿಮೆ (ಶೇಕಡಾ 15ರಷ್ಟು) ಎಂಬುದು ನಿಜ. ಜನಗಳಲ್ಲಿ ವಾಚನಾಭಿರುಚಿ ಬೆಳೆಯುವುದಕ್ಕೆ ನಾವು ಏನು ಪ್ರಯತ್ನ ಮಾಡುತ್ತಿದ್ದೇವೆ; ಅದು ಪರಿಣಾಮಕಾರಿಯಾಗಿದೆಯೇ ಎಂಬುದನ್ನು ಕುರಿತು ವಿಚಾರ ಮಾಡಬೇಕು. ನಮ್ಮ ಹೆಚ್ಚಿನ ಬರವಣಿಗೆಗಳು ಅಪ್ರಬುದ್ಧತೆಯ ಪ್ರದರ್ಶನವಾಗಿ ಕಾಣಿಸುತ್ತದೆಯಾದರೂ ನಾವು ಬರೆಯುತ್ತಿರುವುದೇನೋ ಪ್ರಬುದ್ಧರಿಗಾಗಿ, ಆ ಪ್ರಬುದ್ಧಾವಸ್ಥೆ ಬರುವತನಕ, ಅಂದರೆ, ಐದಾರು ವರ್ಷಗಳಿಂದ ತೊಡಗಿ, ಸುಮಾರು ಇಪ್ಪತ್ತು ವರ್ಷ ಪ್ರಾಯ ಆಗುವ ತನಕ, ನಮ್ಮ ಜನರು ಏನನ್ನು ಓದಬೇಕು? ಹತ್ತು ಹದಿನೆರಡು ವಯಸ್ಸಿನ ಬಾಲಕರು ಕೂಡ ಶಾಲೆಯ ವಾಚನಾಲಯಗಳಿಂದ 'ರಮೇಶ ಲಲಿತೆಯರ ಪ್ರಣಯ' ಕಥಾನಕವನ್ನೇ ಕೊಂಡು ಓದಬೇಕಲ್ಲದೆ, ಅಲ್ಲಿ ಬೇರೆನಿದೆ? ಶಿಶು ಸಾಹಿತ್ಯವೆಷ್ಟಿದೆ? ಮಕ್ಕಳ ಸಾಹಿತ್ಯದಲ್ಲಿ ಭೇತಾಳ, ಬ್ರಹ್ಮರಾಕ್ಷಸ, ಇವರುಗಳೆಲ್ಲ ತುಂಬಿದ್ದರೆ ಸಾಕೆ? ಬೇರೇನೂ ವಿಷಯ, ವೈವಿಧ್ಯಗಳು ಬೇಡವೆ? ಪ್ರಪಂಚವನ್ನು ಕುರಿತು ಅವರಲ್ಲಿ ಆಸಕ್ತಿ, ಅಭಿರುಚಿ ಬೆಳೆಯುವುದಕ್ಕೆ, ಅವರ ಮನಸ್ಸು ಅರಳುವುದಕ್ಕೆ, ಅವರಿಗೆ ಪ್ರಿಯವಾದ ಪ್ರಪಂಚದಲ್ಲಿ ಆಸಕ್ತಿ ಹುಟ್ಟಿಸುವುದಕ್ಕೆ ತಕ್ಕ ಪುಸ್ತಕಗಳಿವೆಯೆ? ಇರುವವುಗಳ ಅಂದ ಚೆಂದವಾದರೂ ಏನು?

ತಾರುಣ್ಯದಲ್ಲಿ ಕಾಲಿರಿಸುತ್ತಿರುವ ಹುಡುಗ ಹುಡುಗಿಯರಿಗೆ ಮನಸ್ಸನ್ನರಳಿಸುವ ಯಾವ ಕಥೆಗಳುಂಟು? ಯಾವ ಬಣ್ಣನೆಗಳುಂಟು? ವೈಜ್ಞಾನಿಕ ಕುತೂಹಲ ಕೆರಳಬಲ್ಲ ಯಾವ ಬರಹ ಉಂಟು? ನಮ್ಮ ಆಬಾಲ ವೃದ್ಧರೆಲ್ಲರೂ ಚಂದಮಾಮದ ಕಥೆಗಳಿಂದ, ರಮೇಶ ಲಲಿತೆಯರ ಕನಸಿನ ಪ್ರಣಯಗಳಿಂದ, ತಮ್ಮ ಹೃದಯ ಮನಸ್ಸುಗಳೆರಡನ್ನೂ ತುಂಬಿಸಿಕೊಂಡು ಬೆಳೆಯಬೇಕಾದಲ್ಲಿ, ಆಗ ಹೇಗೆ ಬೆಳೆದಾರು? ನಾವು ವಾಚನಾಭಿರುಚಿಯನ್ನು ಬೆಳೆಯಿಸಬೇಕಾದ ಈ ಪ್ರಾಮುಖ್ಯ ವಯಸ್ಸಿನಲ್ಲಿಯೇ ಅವರಿಗೆ ತಕ್ಕ ಆಹಾರವನ್ನು ಒದಗಿಸದೆ ಹೋದರೆ, ಅದು ಹೇಗೆ ತಾನೆ ಬೆಳೆದೀತು?

**1954ರಲ್ಲಿ ಮೈಸೂರಿನಲ್ಲಿ ನಡೆದ 37ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಿಂದ ಆಯ್ದಭಾಗಗಳು.**